ಮಧ್ಯದ ತುಳಸಿ ಪೀಠ, ಮನೆ ಪ್ರಾಚೀನ ಕಾಲದ್ದು ಎನಿಸುವಂತೆ ಹಿಂದೆ ನಿಂತ ಅಶ್ವತ್ಥ ಮತ್ತು ತೆಂಗಿನ ಮರಗಳು, ಅಗಸೆ ದ್ವಾರದಂತಿರುವ ತೆರೆದ ಬಾಗಿಲಿನ ಶಾಲು ಹೊದ್ದಂತಿರುವ ಹುಲ್ಲಿನ ಮಫ್ಲರಿನ ಕೋಟೆ ಗೋಡೆ. ಸದಾ ನಿಶ್ಚಲ ನಿಂತ ಮೌನ ಆ ಕಂಪೌಂಡನ್ನು ನಿಗೂಢವಾಗಿಟ್ಟಿತ್ತು. ಇಣುಕಿದರೆ ಎರಡು ಹಿತ್ತಲುಗಳ ಆಚೆ ಕಾಣುವ ಬಿಕೋಗುಡುವ ಸಿನಿಮಾ ಟಾಕೀಜಿಗೂ ಹಿಂದಿನ ಉಪ್ಪು ನೀರಿನ ಸುಂಯಿಗುಡುವ ಗಾಳಿಯ ಜವುಳು ಗದ್ದೆ ಬಯಲಿಗೂ ಮತ್ತು ಪಕ್ಕದ ಗುಂದದ ಕನ್ನಡ ಶಾಲೆಗೂ ಈ ಮನೆ ಸಂಬಂಧವಿಲ್ಲದಂತೆ ಒಂಟಿ ನಿಂತಿತ್ತು. ಕಟ್ಟೆ ಕುಟುಂಬದವರು ವಾಸವಾಗಿದ್ದರಿಂದ ಅದಕ್ಕೆ 'ಕಟ್ಟೆಮನೆ' ಎಂದು ಹೆಸರು ಬಂದಿದೆಯಂತೆ. ಬಸ್ಸಿನವರು 'ಕಟ್ಟೆಮನೆ ಕ್ರಾಸ್' ಎಂದು ಪ್ರಯಾಣಿಕರಿಗೆ ಟಿಕೆಟ್ ಕೊಡುವಷ್ಟು ಆ ಪ್ರದೇಶಕ್ಕೆ ಅದು ಪ್ರಸಿದ್ಧಿಯಾಗಿತ್ತು. ಕಟ್ಟೆಮನೆಯ ಅವಿಭಕ್ತ ಕುಟುಂಬದವರು ಶಿಕ್ಷಣ, ನೌಕರಿ, ಉದ್ಯೋಗ ಎಂದು ದೇಶಾಂತರ ಹೋದವರು ಹೋದಲ್ಲೇ ಶಾಶ್ವತ ನಿವಾಸಿಗಳಾಗಿದ್ದರು. ದೊಡ್ಡ ಹುದ್ದೆಯಲ್ಲಿದ್ದವರು, ಪ್ರತಿಭಾವಂತ ಮನೆತನದವರು ಎಂಬ ಪ್ರಭಾವಳಿ ಆಡುವವರ ಮಾತಿನ ಸುತ್ತ ಕಟ್ಟಿರುತ್ತಿತ್ತು. ಹುಟ್ಟಿದೂರಿನ ನೆನಪಿಗೆ ಮಾರಾಟ ಮಾಡದೆ ಮನೆ ಉಳಿಸಿಕೊಂಡಿದ್ದರು. ಪುಣೆಯಲ್ಲಿರುವ ಗಜಾನನನೇ ಮನೆಗೆ ಹತ್ತಿರದಲ್ಲಿದ್ದವನು. ವಾರಕ್ಕೊಮ್ಮೆ ಮನೆ ಗುಡಿಸಿ, ಕಿಟಕಿ ತೆರೆದು, ದೀಪ ಹಚ್ಚುವ ಕೆಲಸಕ್ಕೊಬ್ಬನನ್ನು ಸಂಬಳಕ್ಕೆ ನೇಮಿಸಿಕೊಂಡಿದ್ದ. ಅವನು ವಹಿಸಿದ ಕೆಲಸ ಮಾಡದೆ ಮನೆ ಉಸ್ತುವಾರಿ ಜನಾರ್ದನ ಅವಧಾನಿಯವರ ಶಾಲಾ ಸಹಪಾಠಿ ಮಗ್ಗಿ ಮಾಸ್ತರರ ಹೆಗಲಿಗೆ ಬಿತ್ತು. ಮದುವೆ ಗಿದುವೆ ಉಸಾಬರಿಗೆ ಹೋಗಿರದ ಸಾಹಿತ್ಯಪ್ರಿಯ ಮಾಸ್ತರರು ತನ್ನ ಇಕ್ಕಟ್ಟಾದ ಬಾಡಿಗೆ ಬಿಡಾರದ ಪಡಿಮಾಡಿನಡಿ ಅಸ್ತವ್ಯಸ್ತವಾಗಿ ಹರಡಿದ್ದ ಪುಸ್ತಕಗಳನ್ನು ಕಟ್ಟೆಮನೆಯ ಜಗಲಿಯ ಖಾಲಿ ಕಪಾಟಿಗೆ ಸ್ಥಳಾಂತರಿಸಿ 'ಸುಲಭ ಸಾಹಿತ್ಯ ವಾಚನಾಲಯ' ಎಂದು ಹಸುರು ಬಣ್ಣದಲ್ಲಿ ತೊಲೆಯ ಮೇಲೆ ಬರೆಯಿಸಿದ್ದರು. ಕೆಲವರ್ಷ ಮಾಸ್ತರಿಕೆ ಮಾಡಿದ ಗುಂದದ ಶಾಲೆಯ ಹಳೆಯ ಬೇಂಚುಗಳನ್ನು ಸವಾಲಿನಲ್ಲಿ ಖರೀದಿಸಿ ವಾಚನಾಲಯದ ಓದುಗರ ಆಸನಕ್ಕೆ ಇರಿಸಿದರು. ಗಜಾನನ ವರ್ಷಕ್ಕೊಂದೆರೆಡು ಸರ್ತಿ ಬಂದು ವಾರ ಉಳಿದು ರಿಪೇರಿ ಕೆಲಸ ಮಾಡಿಸಿ ಹೋಗುತ್ತಿದ್ದ. ನಿವೃತ್ತರಾದ ಬಳಿಕವೂ ಅವರ ಓದಿಸುವ ಗೀಳು ಮುಂದೊರೆದಿತ್ತು, ಕಟ್ಟೆಮನೆಗೆ ಕಳೆ ಕಟ್ಟಿದ್ದು ಜನಾರ್ದನ ಅವಧಾನಿಯವರ ಸಂಸಾರ ಬೀಡುಬಿಟ್ಟದ್ದರಿಂದ.



ಸಂಸಾರವೆಂದರೆ ಜನಾರ್ದನ, ಅವನ ಹೆಂಡತಿ ಯಮುನಕ್ಕ ಮತ್ತು ಕೆನಡಾದಲ್ಲಿದ್ದ ಮಗ ಶ್ರೀಪತಿ. ತೆರಿಗೆ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ವರ್ಷದೊಳಗೆ ಜನಾರ್ದನನ ನೆನಪಿನ ಶಕ್ತಿ ದುರ್ಬಲವಾಗುತ್ತ ಯಾರನ್ನೂ ಗುರುತಿಸಲಾರದ ಮಟ್ಟಕ್ಕೆ ರೋಗ ಉಲ್ಬಣವಾಯಿತು. ಶ್ರೀಪತಿ ಮುಂಬೈ, ಕೆನಡಾ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಿದರೂ ಪ್ರಯೋಜನವಾಗಲಿಲ್ಲ. ಮನೋವೈದ್ಯರ ಚಿಕಿತ್ಸೆ ಫಲಕಾರಿಯಾಗದೆ 'ಏಜ್ ಫ್ಯಾಕ್ಟರ್', 'ಡೆಮಿನ್ಷಿಯಾ' ಮುಂತಾದ ಪದಪ್ರಯೋಗ ಮಾಡಿ, 'ಅವರು ಇಷ್ಟಪಡುವ ಸ್ಥಳ ಯಾವುದಾದ್ರೂ ಇದ್ರೆ ಅಲ್ಲಿ ಕಾಲ ಕಳೆಯಲಿ. ಬೂದಿಯಲ್ಲಿ ಅಡಗಿದ ಕೆಂಡ ಊದಿದಾಗ ಜ್ವಲಿಸುವಂತೆ ನೆನಪಿನ ಕಿಡಿ ಸಿಡಿಯಬಹುದು. ಅವರ ಅದೃಷ್ಟ ಚೆನ್ನಾಗಿದ್ರೆ ಅಂಥಾದ್ದೊಂದು ಪವಾಡ ನಡೆಯಬಹುದು' ಎಂದು ಔಷಧದಿಂದ ಗುಣವಾಗಲು ಸಾಧ್ಯವಿಲ್ಲದ ವಾಸ್ತವವನ್ನು ಹೇಳಿ ಮನೆಗೆ ಕಳುಹಿಸಿದ್ದರು.

ಪರ್ವತೇಶ್ವರದಲ್ಲಿ ಜನಾರ್ದನನ ಹೆಸರಿನಲ್ಲಿ